ಹಾಸ್ಯ

# ನಮ್ಮಾವನ್ ಮನ್ಯಾಗ ಹಿಂಗೆರ್ಡು ಕಳ್ತನ..



■ ಡಾ. ಸೀಮಂತಿನಿ ದೇಸಾಯಿ

ನಮ್ಮಾವನಿಗೆ ತಿರ್ಗೋ ಚಟ. ಹೆಂಡ್ತೀನ ಕಳ್ಕೊಂಡು, ಇದ್ದೊಬ್ಬ ಮಗಂಗ ಮದ್ವಿ ಮಾಡ್ಸಿ ಅಂವ ಅಮೆರಿಕದ ಅಮ್ಲು ಹಿಡ್ದು ಹೊಂಟ್‌ಮ್ಯಾಲ ಮನ್ಯಾಗ ಕಾಲ ಕಳೀವಲ್ದಾಗಿ ಊರೂರು ಸುತ್ಲಿಕ್ ಶುರು ಮಾಡಿದ್ದ. ಅತ್ತಣಿಂದ ಮಗ ಒಂದೇ ಸಮ ಅಮೆರಿಕಾಗ್ ಬಾ ಅಂತ ಪಾಸ್‌ಪೋರ್ಟು, ವೀಸಾ ಅಂತ ಮಾಡ್ಸಿಕೊಟ್ಮ್ಯಾಲ, ಇಂವಾನೂ ಮೂರು ತಿಂಗ್ಳು ಇಲ್ಲಿ, ಆರು ತಿಂಗ್ಳು ಅಲ್ಲಿ ಅಂತ ತಿರುಗಾಡ್ಲಿಕ್ ಶುರು ಮಾಡ್ದ.

ಹಿಂಗss ಒಂದ್ಸಾರಿ ಹೋಗೋ ಮುಂದ ಎಥಾ ಪ್ರಕಾರ ತನ್ ಮನೀಗ್ ಬೀಗ ಜಡ್ಡಿದ್ದ. ಮನ್ಯಾಗಿನ್ ಎಲ್ಲಾ ಕೋಣಿಗೂ ಒಂದೊಂದ್ ಬೀಗ ಜಡ್ಡಿದ್ದ. ಕೋಣ್ಯಾಗಿನ್ ಒಂದೊಂದ್ ಅಲ್ಮಾರೀಗೂ ಬೀಗ ಜಡ್ಡಿದ್ದ. ಹಂಗೇ ಹಳೀ ಸಾಮಾನು, ಪಾತ್ರಿ ಪಗಡ, ಪೇಪರ್ರು, ಪ್ಲಾಸ್ಟಿಕ್ಕು, ಬಾಟ್ಲಿ ಎಲ್ಲಾ ಒಂದ್ರೂಮಿಗ್ ಪೇರ್ಸಿ ಬೀಗ ಜಡ್ಡಿದ್ದ. ಗ್ಯಾಸ್ ಸ್ಟವ್ವಿಗೂ ಸಿಲಿಂಡ್ರಿಗೂ ಸೇರ್ಸಿ ಬೀಗ ಜಡ್ಡಿದ್ದ. ಮನ್ಯಾಗಿನ್ ಎಲ್ಲಾ ಟ್ರಂಕು, ಸೂಟ್‌ಕೇಸ್‌ಗಳಿಗೂ ಬೀಗ ಜಡೀಬೇಕನ್ನಿಸ್ತೇನೋ, ಅದೂ ಮಾಡಿದ್ದ. ಮನಿ ಸುತ್ತ ಕಬ್ಬಿಣದ ಜಾಲರಿ ಹಾಕಿದ್ದಕ್ಕೂ ಎರಡೆರಡು ಬೀಗ ಜಡ್ಡಿದ್ದ!

ಇಷ್ಟೆಲ್ಲಾ ಬೀಗ ಎಲ್ಲಿಂದ ತಂದಾಂದ್ರಿ? ಅದೇ ಮನೆ ಬಳಿ ಇರೋ ಪುಟ್ಶೆಟ್ಟಿ ಅಂಗ್ಡೇಲಿ! ಅವಂಗೂ ನಮ್ಮಾವನೇನಾರಾ ಬೀಗ್ಗಳ ಅಂಗ್ಡಿ ಅಮೆರಿಕಾದಲ್ಲಿ ಇಡ್ತಾನೇನೋ ಅನ್ನೋ ಅನುಮಾನ ಬಂದಿರ್ಬೇಕು!

ಹಿಂಗೆ ಬೀಗ ಜಡ್ದು ನಮ್ಮಾವ ಅಮೆರಿಕಾಗೆ ಹೋಗಿ ಎರ್ಡು ತಿಂಗ್ಳಾಗ ಒಂದು ಕಳ್ತನ ಆತು. ಅದೂ ಹ್ಯಾಂಗ ಗೊತ್ತಾತಪ ಅಂದ್ರ, ಮನೀಕಡಿ ನೋಡ್ಕೊಂಬಾ ಅಂತ ಮ್ಯಾಲಿಂದ ಮ್ಯಾಲ ನಂಗ ಫೋನಾಯ್ಸಿದ್ ಮ್ಯಾಲ ಒಂದಿನ ನಾನೂ ಹೊಂಟು ನೋಡೋದ್ರಾಗೆ ಮನಿ ಎಲ್ಲಾ ಹಾರೊಡ್ದಿತ್ತು. ಕಳ್ಳಂಗ ಈಟೊಂದು ಬೀಗ್ಗಳನ್ನ ನೋಡಿ ಏನೋ ಭಾರಿ ಕುಳ ಅದಾನೇನೋ ಅನ್ಸಿರ್ಬೇಕು ನೋಡ್ರಿ. ಅವನ್ಹೆಂಗೆ ಸದ್ದಿಲ್ದಂಗೆ ಬೀಗ ಒಡ್ದನೋ ನಾಕಾಣೆ. ಅಕ್‌ಪಕ್‌ದ ಯಾರ್ಗೂ ಗೊತ್ತೇ ಇಲ್ಲಾಂದ್ರ ನೀವೇ ಯೋಚಿಸ್ಕೊಳ್ರಿ!

ಅಂವ ಒಂದು ಬೀಗ ಒಡ್ಯೋ ಮುಂದ ಭಾಳಾ ನೀರು ಬಂದಿರ್ಬೇಕು ಬಾಯಾಗ! ಅದೇ ಕೊಳಿ ಬಟ್ಟೆ, ಬುಟ್ಟಿ, ಚಪ್ಲಿ, ಪುಸ್ತಕ ನೋಡಿ ಬಾಯಾಗಿನ್ ನೀರ್ ಕೂಡ ಆರಿರ್ಬೇಕ್ ನೋಡ್ರಿ ಮತ್ತ. ಅಲ್ಲಾ ಬಂಗಾರ, ಬೆಳ್ಳಿ, ದುಡ್ಡು ಅಂತ ಹುಡ್ಕೊಂಡ್ ಬಂದವ್ರಿಗ್ ಬರೀ ಬೀಗ ಒಡ್ದು ಒಡ್ದು ಹುಚ್ಚು ಹಿಡ್ದಿರ್‌ಬಹುದು ಅಂತ ನನ್ ಎಣ್ಕೆ. ಅಂತೂ ಕಳ್ರಿಗೇ ಹುಚ್ಚು ಹಿಡಿಸಿದ್ದ ನಮ್ಮಾವ.

ಮನ್ಯಾಗಂತೂ ಕಳ್ರಿಗೆ ಏನೂ ಸಿಕ್ಕಿಲ್ಲ. ಆದ್ರ ಎಲ್ಲಾ ಕೋಣೆವ್ದು ಬೀಗ ಒಡ್ದು, ಬಾಗ್ಲಾ ಮುರ್ದು ಸಾಮಾನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಹೊಂಟ್ಹೋಗಿದ್ರು. ನಾನು ಹಾರು ಹೊಡ್ದಿರೋ ಮನೀ ಮ್ಯಾಲ ಪೋಲೀಸ್ ಕಂಪ್ಲೇಂಟು ಬರ್ದ್ಕೆ. ಬಂದ್ ನೋಡ್ದ ಪೋಲೀಸ್ರು, ಬೀದ್ಯಾಗಿನ್, ಹಾದ್ಯಾಗಿನ್ ಮಂದಿ, ಅಕ್ಕಪಕ್ಕದ ಜನ್ಗೋಳು ಎಲ್ಲಾ ಒಂದೇ ಪ್ರಶ್ನೆ ಕೇಳೋದೆ– ದುಡ್ಡು, ಬಂಗಾರ ಇಲ್ಲಾಂದ್ಮ್ಯಾಲ ಯಾಕಪ್ಪಾ ಇಂವ ಇಷ್ಟೊಂದ್ ಬೀಗ ಜಡ್ದ ಅಂತ!

ಪೋಲೀಸ್ರು ಕಂಪ್ಲೇಂಟೇನೋ ಬರ್ಸಿದ್ರು.ಆದ್ರ ಯಾರ್ನೂ ಹಿಡ್ಯೋ ಪ್ರಯತ್ನ ಮಾಡ್ಲಿಲ್ಲ. ಅದೇ ಪುಟ್‌ಶೆಟ್ಟಿ ಬಲ್ಲಿ ಇನ್ನಾ ಎರ್ಡು ಬೀಗ ತಕ್ಕೊಂಡು ಹಿಂದೊಂದು–ಮುಂದೊಂದು ಬೀಗ ಜಡ್ದು ನಾ ಹೊಂಟೆ.

ನಾಕ್ ತಿಂಗ್ಳಾಗೇ ನಮ್ಮಾವ ಓಡೋಡಿ ಬಂದ. ಬಂದವ್ನೇ ಬಾಯಿಬಾಯಿ ಬಡ್ಕೊಂಡು ಪೋಲೀಸ್ ಸ್ಟೇಶನ್ಗೆ ಓಡ್ದ. 'ಯಾವ ಕಳ್ಳಾನೂ ಸಿಕ್ಕಿದ್ದಿಲ್ಲ. ಅಲ್ಲೇನೂ ಕಳ್ತನ ಆಗಿಲ್ಲಾಂದ್ಮ್ಯಾಲ ಯಾರ್ನ ಹಿಡಿಲಿಕ್ ಬರಂಗಿಲ್ರೀ' ಅಂತ ಭಾಳ ಗಂಭೀರ ಮಖ ಮಾಡ್ಕೊಂಡು ಇನ್‌ಸ್ಪೆಕ್ಟ್ರೇ ಹೇಳಿದ್ಮ್ಯಾಲೆ ಇನ್ನೇನ್ ಮಾಡೋದೂಂತ ಖಾಲಿ ಕೈ ಬಂದ– ಕೇಸು ಕ್ಲೋಸಾಯ್ತುಂತ.

ಈಗ ನಮ್ಮಾವ ಒಡ್ದಿರೋ ಬಾಗ್ಲಾ, ಅಲಮಾರೀ, ಟ್ರಂಕು, ಬೀಗ ರಿಪೇರಿ ಮಾಡ್ಲಿಕ್ಕೆ ಭಾಳಾನೆ ಖರ್ಚು ಮಾಡ್ದ್ನಂತ. ಭಾಳಾ ಫಜೀತಿ ಅಂತ ಗೋಳ್ಹೊಯ್ಕೊಂಡ. ಅಷ್ಟ್ರಾಗ ಮಗ ಆಸ್ಟ್ರೇಲಿಯಾಗ ಟೂರ್ ಅಂತ್ಹೇಳಿ ಟಿಕೀಟು ಕಳ್ಸ. ಸರಿ ನಮ್ಮಾವ ಮತ್ತ್ ಹೊಂಟ್ ನಿಂತ. ಎಲ್ಲಾ ಬಂದೋಬಸ್ತ್ ಮಾಡ್ದ. ಮನೀಗೆ ಮುಂದೊಂದು, ಹಿಂದೊಂದು ಚಿಲಕ ಕೂಡ್ಸಿ ಬೀಗ ಹಾಕ್ದ. ಬಾಗ್ಲಾಗ ಕೂಡ್ಸಿದ್ ಬೀಗಕ್ಕೆ ಭಾಳ ದುಡ್ದು ಖರ್ಚು ಮಾಡಿದ್ದ. ಎಲ್ಲಾ ಕೋಣೇನೂ ತೆಗ್ದಿಟ್ಟ. ಟ್ರಂಕುಗೋಳೆಲ್ಲಾ ಹಾಸ್ಗಿ ಮ್ಯಾಲಿಟ್ಟು ಬೀಗ ತೆಗೆದೇ ಇಟ್ಟ, ಎಲ್ಲಾ ಅಲಮಾರೀನೂ ಖುಲ್ಲಾ ಇಟ್ಟ, ಮತ್ತ ಹೊಂಟ!

ಈ ಸಲಾನೂ ಕಳ್ರು ಬಂದೇ ಬಂದ್ರು. ಆದ್ರ ಬ್ಯಾರೇ ಕಳ್ರೇ ಇರ್ಬೇಕು. ಮೊದ್ಲು ಬಂದ್ ಕಳ್ಳ ಇವ್ನ ಸಾವಾಸ ಬ್ಯಾಡಾಂತ ಬಂದಿರ್ಲಿಕ್ಕಿಲ್ಲ ಅಂತ ಪೋಲೀಸ್ರ ಅಂಬೋಣ. ಯಾಕಂದ್ರ ಬಂದವ ಹಳೀ ಬಟ್ಟೇ ಎಲ್ಲಾ ಗಂಟ್ ಕಟ್ಕೊಂಡು ಹೋಗಿದ್ದ.

ಈ ಸಲಿ ಮನೀ ನೋಡ್ಕೊಂಡು ಬರ್ಲಿಕ್ ಹೋದ್ ನಂಗೂ ಕಳ್ತನ ಆಗಿದ್ದೇ ಗೊತ್ತಾಗಿಲ್ಲ! ನಮ್ಮಾವ ಟೂರಿಂದ ವಾಪ್ಸಾದ್ಮ್ಯಾಲೇ ಕತಿ ಗೊತ್ತಾಗಿದ್ದು!

ಲಬೋ ಲಬೋಂತ ಹೋಗಿ ಏನೂ ಕಂಪ್ಲೇಂಟೇ ಮಾಡ್ಲಿಲ್ಲಾಂತರೀ ನಮ್ಮಾವ. ಬಂದೋರ್ಗೆಲ್ಲಾ ತನ್ ಐಡಿಯಾ ಕತಿ ಹೇಳ್ಕೊಂಡೇ ಹೇಳ್ಕೊಂಡ. ಪೋಲೀಸ್ರೂ ಕೆಲ್ಸ ಕಮ್ಮಾಯ್ತುಂತ ನಿಟ್ಟುಸ್ರು ಬಿಟ್ರಂತ. ನೀವೂ ಟ್ರೈ ಮಾಡ್ನೋಡ್ರಲ್ಲ ಮತ್ತ.